2) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ : 3256.00

3) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ : 660.00

ಆ) ಕ್ಷೇತ್ರಗಳ ಸಂಖ್ಯೆ

1) ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ : 39

2) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ : 71

3) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ : 76

ಇ) ಯಾವುದೇ ರೀತಿಯ ತಾರತಮ್ಯವಿರುವುದಿಲ್ಲ.

ರಾಜ್ಯದಲ್ಲಿ ಕ್ರೀಡಾಂಗಣಗಳ ಕೊರತೆ.

1545(2270)

ಶ್ರೀ ಪಾಟೀಲ್ ಜೆ.ಟಿ.(ಬೀಳಗಿ): ಮಾನ್ಯ ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆವಿಗೂ ಕ್ರೀಡಾಂಗಣವಾಗದೇ ಇರುವ ತಾಲ್ಲೂಕುಗಳೆಷ್ಟು? ಮಾಹಿತಿ ನೀಡುವುದು.

ಆ) ಕ್ರೀಡಾಂಗಣ ಆಗದೇ ಇರುವ ತಾಲ್ಲೂಕು ಸ್ಥಳಗಳಲ್ಲಿ ಕ್ರೀಡಾಂಗಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು).

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) 61 ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಕ್ರೀಡಾಂಗಣ ಆಗದೇ ಇರುವ ತಾಲ್ಲೂಕು ಸ್ಥಳಗಳಲ್ಲಿ ಕ್ರೀಡಾಂಗಣ ನಿರ್ಮಿಸಲು ಸೂಕ್ತ ನಿವೇಶನವನ್ನು ಹುಡುಕಲಾಗುತ್ತಿದೆ. ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕಾಗಿ 8 ಎಕರೆ ನಿವೇಶನ ಅವಶ್ಯಕತೆ ಇದೆ. ನಿವೇಶನವನ್ನು ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಪಟುಗಳು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಸ್ಥಳದಲ್ಲಿ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಈ ನಿವೇಶನವನ್ನು ಉಚಿತವಾಗಿ

ಪಡೆಯಬೇಕಾಗಿರುವುದರಿಂದ ಹಾಗೂ ತಾಲ್ಲೂಕು ಕೇಂದ್ರದಲ್ಲೇ ಪಡೆಯಬೇಕಾಗಿರುವುದರಿಂದ, 8 ಎಕರೆ ನಿವೇಶನವು ಪಡೆಯಲು ಕಷ್ಟಕರವಾಗುತ್ತಿದೆ. ಆದಾಗ್ಯೂ ಈ ನಿವೇಶನವನ್ನು ಪಡೆಯಲು ತಾಲ್ಲೂಕುವಾರು ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ ಮತ್ತು ಆ ಗೆ ಅನುಬಂಧ.

ಬೆಂಗಳೂರು ವಿಭಾಗ:

1) ಬೆಂಗಳೂರು ನಗರ ಜಿಲ್ಲೆ:-

1) ಬೆಂಗಳೂರು ಉತ್ತರ:	ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 3 ನಿವೇಶನಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 2 ನಿವೇಶನ ಇಲಾಖೆಗೆ ಹಸ್ತಾಂತರಗೊಂಡಿದ್ದು, ಇದರಲ್ಲಿ 2 ನಿವೇಶನ ಇಲಾಖೆಗೆ ಹಸ್ತಾಂತರಗೊಂಡಿದ್ದು, ಉಳಿದ ಇನ್ನೊಂದು ನಿವೇಶನವನ್ನು ಹಸ್ತಾಂತರಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
2) ಬೆಂಗಳೂರು ದಕ್ಷಿಣ:	ಗಾಣಕಲ್ ಗ್ರಾಮದಲ್ಲಿ ಸರ್ವೆ ನಂ. 14ರಲ್ಲಿ 8 ಎಕರೆ ನಿವೇಶನ ಇದ್ದು ನಿವೇಶನ ಇಲಾಖೆಗೆ ಹಸ್ತಾಂತರಗೊಳಿಸಲು ಕೋರಿ ತಹಸೀಲ್ದಾರ್‌ರವರಿಗೆ ಪತ್ರ ಬರೆಯಲಾಗಿದೆ.

2) ಬೆಂಗಳೂರು ಗ್ರಾಮಾಂತರ ಜಿಲ್ಲೆ:

3) ದೇವನಹಳ್ಳಿ:	ದೇವನಹಳ್ಳಿಯ ಸರ್ಕಾರಿ ಜ್ಯೂನಿಯರ್ ಕಾಲೇಜಿನಲ್ಲಿ 7 ಎಕರೆ ಜಮೀನಿದ್ದು ಇಲ್ಲಿ ಕ್ರೀಡಾಂಗಣ ನಿರ್ಮಿಸಲು ದಿ:25-7-2000 ದಂದು ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.
4) ಚೆನ್ನಪಟ್ಟಣ:	ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಈವರೆಗೆ ನಿವೇಶನ ದೊರಕಿರುವುದಿಲ್ಲ. ಸ್ಥಳೀಯ ಶಾಸಕರು ನಿವೇಶನ ಕೊಡುವುದಾಗಿ ತಿಳಿಸಿದ್ದು ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

3) ಕೋಲಾರ ಜಿಲ್ಲೆ:

5) ಗುಂಡಿಬಂಡೆ:	ನಿವೇಶನ ಇರುವುದಿಲ್ಲ.

6) ಶ್ರೀನಿವಾಸಪುರ	ಕೊಳ್ಳೂರು ಕೆರೆ ಸರ್ವೆ ನಂ. 106ರಲ್ಲಿ 12 ಎಕರೆ ಜಮೀನಿದ್ದು ಇಲಾಖೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದು.
7) ಗೌರಿಬಿದನೂರು	ನಿವೇಶನ ಗುರುತಿಸಲಾಗಿದೆ.
4) ತುಮಕೂರು ಜಿಲ್ಲೆ:	
8) ಚಿಕ್ಕನಾಯಕನಹಳ್ಳಿ	ನಿವೇಶನ ಗುರುತಿಸಿದ್ದು, ವಿವಾದದಲ್ಲಿದೆ.
9) ಕೊರಟಗೆರೆ	ಜ್ಯೂನಿಯರ್ ಕಾಲೇಜು ಮೈದಾನವನ್ನು ಪಡೆಯಲು ಪತ್ರ ವ್ಯವಹಾರ ನಡೆಸಲಾಗುತ್ತಿದೆ.
10) ತುರುವೇಕೆರೆ	ನಿವೇಶನ ಇರುವುದಿಲ್ಲ.
11) ಕುಣಿಗಲ್	ಜಮೀನು ಇರುವುದಿಲ್ಲ.
12) ಗುಬ್ಬಿ	ಜ್ಯೂನಿಯರ್ ಕಾಲೇಜು ಮೈದಾನವನ್ನು ಪಡೆಯಲು ಪತ್ರ ವ್ಯವಹಾರ ನಡೆಸಲಾಗುತ್ತಿದೆ.
5) ಶಿವಮೊಗ್ಗ ಜಿಲ್ಲೆ:	
13) ಚೆನ್ನಗಿರಿ	ನಿವೇಶನ ದೊರಕಿರುವುದಿಲ್ಲ
14) ಭದ್ರಾವತಿ	ನಿವೇಶನ ದೊರಕಿರುವುದಿಲ್ಲ.
6) ಚಿತ್ರದುರ್ಗ ಜಿಲ್ಲೆ:	
15) ಮೊಣಕಾಲ್ಮೂರು	ಜ್ಯೂನಿಯರ್ ಕಾಲೇಜು ಮೈದಾನದಲ್ಲಿ 6 ಎಕರೆ ಜಮೀನು ಕೊಡುವುದಾಗಿ ತಿಳಿಸಿದ್ದು ಇಲಾಖೆಗೆ ಹಸ್ತಾಂತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.
7) ದಾವಣಗೆರೆ ಜಿಲ್ಲೆ:	
16) ಜಗಳೂರು	ನಿವೇಶನ ದೊರಕಿರುವುದಿಲ್ಲ

ಮೈಸೂರು ವಿಭಾಗ:

8) ಮೈಸೂರು ಜಿಲ್ಲೆ:

17) ಟಿ ನರಸೀಪುರ	ನಿವೇಶನ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
18) ಹುಣಸೂರು	ಹುಣಸೂರು ತಾಲ್ಲೂಕು ಕಸಬಾ ಹೋಬಳಿ ಮಾಕನಹಳ್ಳಿಯಲ್ಲಿರುವ ಸರ್ವೆ ನಂ.91, 118, 119ರಲ್ಲಿ ಲಭ್ಯವಿರುವ ಜಮೀನನ್ನು ಇಲಾಖೆಗೆ ಪಡೆಯಲಾಗಿದೆ.
19) ಪಿರಿಯಾಪಟ್ಟಣ	ಪಿರಿಯಪಟ್ಟಣ ತಾಲ್ಲೂಕು ದರವೆ ಮಲ್ಲರಾಜಪಟ್ಟಣ ಗ್ರಾಮದ ಸರ್ವೆ ನಂ. 161ರಲ್ಲಿ ಗುರುತಿಸಲಾಗಿರುವ 8 ಎಕರೆ ಜಾಗದಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದನ್ನು ಖಾಲ್ಲಾ ಮಾಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ.

9) ಹಾಸನ ಜಿಲ್ಲೆ:

20) ಆಲೂರು	ಆಲೂರು ತಾಲ್ಲೂಕು ಪದವಿಪೂರ್ವ ಕಾಲೇಜಿನ ಭಾಗದಲ್ಲಿ ಸರ್ವೆ ನಂ.92ರಲ್ಲಿ 8 ಎಕರೆ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆ.
21) ಅರಕಲಗೂಡು	ಕ್ರೀಡಾಂಗಣ ನಿರ್ಮಾಣ ಮಾಡಲು ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲು ಪತ್ರ ವ್ಯವಹಾರ ಮಾಡಲಾಗುತ್ತಿದೆ.

10) ಚಿಕ್ಕಮಗಳೂರು ಜಿಲ್ಲೆ:

22) ಕೊಪ್ಪ	ನಿವೇಶನ ನೀಡುವಂತೆ ತಾಲ್ಲೂಕಿನ ತಹಸೀಲ್ದಾರರವರನ್ನು ಸಂಪರ್ಕಿಸಲಾಗಿದೆ.
23) ಶೃಂಗೇರಿ	ನಿವೇಶನ ಗುರುತಿಸಲಾಗಿದ್ದು ಇಲಾಖೆಯ ವಶಕ್ಕೆ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

11) ಮಂಡ್ಯ ಜಿಲ್ಲೆ:

24) ಮಳವಳ್ಳಿ	ನಿವೇಶನ ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
25) ಪಾಂಡವಪುರ	ನಿವೇಶನ ದೊರಕಿದ್ದು, ಅಡಳಿತಾತ್ಮಕ ಮಂಜೂರಾತಿ ನಿರೀಕ್ಷಿಸಲಾಗಿದೆ.
26) ನಾಗಮಂಗಲ	ಜಮೀನನ್ನು ಗುರುತಿಸಲಾಗಿದ್ದು, ಇಲಾಖೆಗೆ ಹಸ್ತಾಂತರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

12) ಚಾಮರಾಜನಗರ ಜಿಲ್ಲೆ:

27) ಯಳಂದೂರು	ನಿವೇಶನ ದೊರಕಿರುವುದಿಲ್ಲ. ನಿವೇಶನ ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

13) ಗುಲ್ಬರ್ಗ ವಿಭಾಗ:

13. ಗುಲ್ಬರ್ಗ ಜಿಲ್ಲೆ:

28) ಸೇಡಂ	ನಿವೇಶನ ದೊರಕಿರುವುದಿಲ್ಲ. ನಿವೇಶನ ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
29) ಚಿತ್ತಾಪುರ	- '' -
30) ಅಫಜಲ್‌ಪುರ	- '' -
31) ಅಳಂದ	- '' -
32) ಶೋಲಾಪುರ	- '' -

14) ಬೀದರ್ ಜಿಲ್ಲೆ:

33) ಬಾಲ್ಕಿ	ನಿವೇಶನ ಲಭ್ಯವಿರುವುದಿಲ್ಲ ನಿವೇಶನ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

15) ರಾಯಚೂರು ಜಿಲ್ಲೆ

34) ದೇವನದುರ್ಗ	ನಿವೇಶನ ದೊರಕಿರುವುದಿಲ್ಲ. ನಿವೇಶನ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
35) ಮಾನ್ವಿ	ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸೇರಿದ ಜಮೀನನ್ನು ಗುರುತಿಸಲಾಗಿದೆ.

16) ಬಳ್ಳಾರಿ ಜಿಲ್ಲೆ:

36) ಸಂಡೂರು	ನಿವೇಶನ ದೊರಕಿರುವುದಿಲ್ಲ ಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
37) ಹಗರಿಬೊಮ್ಮನಹಳ್ಳಿ	- '' -
38) ಕೂಡ್ಲಗಿ	- '' -

17) ಬೆಳಗಾಂ ವಿಭಾಗ:

39) ರಾಮದುರ್ಗ	- '' -
40) ರಾಯ್‌ಬಾಗ್	- '' -
41) ಖಾನಾಪುರ	- '' -

18) ಬಿಜಾಪುರ ಜಿಲ್ಲೆ:

42) ಬಸವನಬಾಗೇವಾಡಿ	- '' -
43) ಮುದ್ದೆಬಿಹಾಳ	- '' -
44) ಇಂಡಿ	- '' -
45) ಸಿಂದಗಿ	- '' -

19) ಬಾಗಲಕೋಟೆ ಜಿಲ್ಲೆ:

46) ಬೀಳಗಿ	ನಿವೇಶನ ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

47) ಬಾದಾಮಿ	ನಿವೇಶನ ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
20) ಧಾರವಾಡ ಜಿಲ್ಲೆ:	
48) ನವಲಗುಂದ್	ನಿವೇಶನ ದೊರಕಿರುವುದಿಲ್ಲ. ಪಡೆಯುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
49) ಕುಂದಗೋಳ್	- '' -
50) ಹುಬ್ಬಳ್ಳಿ	- '' -
51) ಕಲಘಟಗಿ	- '' -
21) ಕಾರವಾರ ಜಿಲ್ಲೆ	
52) ಅಂಕೋಲ	- '' -
53) ಕುಮಟ	- '' -
54) ಹೊನ್ನಾವರ	- '' -
55) ಭಟ್ಕಳ	- '' -
56) ಸಿದ್ಧಾಪುರ	- '' -
22) ಹಾವೇರಿ ಜಿಲ್ಲೆ:	
57) ಹಿರೇಕೆರೂರು	- '' -
58) ಬ್ಯಾಡಗಿ	- '' -
59) ಸವಣೂರು	- '' -
23) ಗದಗ್ ಜಿಲ್ಲೆ	
60) ನರಗುಂದ	- '' -
61) ಮುಂಡರಗಿ	- '' -